ನಿಮ್ಮನ್ನು ಹಾಂಗ ನೋಡಿಕಂತೀವಿ ಅಂತ ಹೇಳೋದು. ನಿಮ್ಮ ಮಗನಿಗೆ ಇದೆಲ್ಲಾ ವಿಷಯ ಹೇಳ್ತೈತಿ. ಈಗ ಎಲ್ಲಾ ಸಾಮಾನು ಹಂಚಿ ಬುಡಾಮು' ಎಂದು ಎಲ್ಲಾರು ಕೂಡಿ ಊರೂರಿಗೆ ಪಾಟಿಚೀಲ, ಪುಸ್ತಕ ಹಂಚಲು ಹೋದರು.

ಒಂದು ಲಕ್ಷದ ಮೇಲೆ ಓಟು ಇದ್ದುದರಿಂದ ಅಷ್ಟು ಪಾಟಿಚೀಲ, ಪುಸ್ತಕ ತಂದಿದ್ದರು. ಕೆಂಚನನ್ನು ಮುಂದು ಮಾಡಿಕೊಂಡು ಹೊರಟರು. ಪ್ರತಿ ಮನೆಗೂ ಕೆಂಚನ ಬಗ್ಗೆ ಹೇಳಿದರು. 'ನೋಡ್ರಿ ಗೌಡ್ರು ಕೆಂಚನ್ನ ಮನ್ಯಾಗಿಟುಕೊಂಡು ಮನೆ ಮಗನಂಗ ನೋಡಿಕೊಂಡಾರ. ಅವರಿಗೆ ಯಾವ ಜಾತಿ ಭೇದಭಾವ ಇಲ್ಲ. ಇವರಿಂದ ಒಳ್ಳೇ ಕೆಲಸ ಆತಾವು. ಆಶೀರ್ವಾದ ಮಾಡ್ರಿ' ಎಂದು ಜನರಿಗೆ ಪಾಟಿಚೀಲ, ಪುಸ್ತಕ ಹಂಚಿ ಬೇಡಿಕೊಂಡರು.

ಸೂಗನಗೌಡ ಹಲವು ಕಡೆ ಜನರನ್ನುದ್ದೇಶಸಿ, 'ನಿಮ್ಮ ಉದ್ಧಾರ ವಿದ್ಯಾಭ್ಯಾಸದಾಗೈತಿ. ನೀವು ಕಲಿಬೇಕು. ಮುಂದು ಬರಬೇಕು. ಅದಕ್ಕ ನಮ್ಮ ಗೌಡ್ರ ಮಗ ಅಮೆರಿಕದಿಂದ ಬರ್ತಾನ. ನಿಮಗೊಂದು ಸಾಲಿ ಕಟ್ಟಿಸಿಕೊಡ್ತಾನ. ನೀವು ಗೌಡ್ರ ಕೈ ಹಿಡಿಬೇಕು' ಎಂದು ಭಾಷಣ ಮಾಡಿದ. ಶಾಂತಗೌಡರು ಎಲ್ಲವನ್ನು ಮೂಕವಾಗಿ ನೋಡುತ್ತಿದ್ದರು.

ಈ ಮುಖಂಡರೆಲ್ಲ ಬೆಂಗಳೂರಿನಲ್ಲಿ ಶಾಂತಗೌಡರ ಮಗನ್ನ ಭೇಟಿಯಾಗಿ ಇಷ್ಟಿಷ್ಟು ಹಣ ಕೊಡಬೇಕೆಂದು ಮಾತಾಡಿ ಸೂಟುಕೇಸು ತಗಂಡು ಬಂದಿದ್ದರು. ಚುನಾವಣೆ ಎಂಟು ದಿನ ಇರುವಾಗ ನೀವು ಬಂದರ ಸಾಕು ಎಂದು ಹೇಳಿದ್ದರು. ಇವರಿಗೆ ದಲಿತರ ಓಟು ಸೆಳೆಯಲು ಕೆಂಚನೇ ದಾಳವಾಗಿದ್ದ. ದಲಿತನನ್ನು ಮನೆಯಲ್ಲಿ ಇಟ್ಟುಕೊಂಡು ಸಾಕಿ ಸಲಹುವ ಗೌಡ್ರು ನಿಮ್ಮನ್ನು ಅದೇ ರೀತಿ ನೋಡಿಕೊಳ್ಳುತ್ತಾರೆ ಎಂಬ ಭರವಸೆಯನ್ನು ನೀಡುತ್ತಿದ್ದರು. ಇದೆಲ್ಲವು ಕೆಂಚನಿಗೆ ವಿಚಿತ್ರವಾಗಿ ಕಾಣುತಿತ್ತು.

ಊರೂರು ಸುತ್ತಾಡಿ ಸುಸ್ತಾಗಿದ್ದ ಗೌಡ್ರರು ಮನೆಗೆ ಬಂದು ಕುರ್ಚಿ ಮೇಲೆ ಕುಳಿತರು. ಕೆಂಚ ಸಮೀಪ ಬಂದು ಕಾಲು ಒತ್ತಿದ. ಬಿಸಿ ನೀರು ಕಾಯಿಸಿಕೊಂಡು ಬಂದು, 'ಯಪ್ಪಾ... ಕಾಲು ಸ್ವಲ್ಪ ಹೊತ್ತು ಬಿಸಿ ನೀರಿನ್ಯಾಗ ಇಡರಿ, ಆರಾಮು ಅನಿಸ್ತದ. ನಿಮಗ ನಾಲ್ಕು ಬಿಸಿ ರೊಟ್ಟಿ ಮಾಡಿಕೊಡ್ತೀನಿ. ಉಂಡು ಮಲಿಗಿ ಬುಡ್ರಿ' ಎಂದು ಎದ್ದ. ಗೌಡ್ರು ಅವನ ಕೈ ಹಿಡಕೊಂಡು 'ಲೇ ಕೆಂಚಾ... ಕೆಂಚಪ್ಪಾ... ನಿಂದು ನಂದು ಯಾವ ಜನ್ಮದ ಋಣಾಲೇ... ನನ್ನನ್ನ ಕೂಸಿನ್ನ ನೋಡಿಕಂಡಂಗ ನೋಡಿಕಂತಿದ್ದಿ... ನನಗ ತ್ರಾಸು ಆತದ ಅಂತಾನೆ ನೀ ಮದುವಿ ಆಗಲಿಲ್ಲ ಹೌದಲ್ಲೋ...' ಎಂದು ಕೈಯನ್ನು ಹಣೆಗೆ ಒತ್ತಿಕೊಂಡರು. ಕೆಂಚನಿಗೆ ಗೌಡ್ರ ವರ್ತನೆ ಆಶ್ಚರ್ಯವೆನಿಸಿತು. 'ಯಪ್ಪೋ, ಹಿಂಗ್ಯಾಕ ಮಾತಾಡುತೀರಿ. ನಾ ಇರಾದ ಹಿಂಗಪ್ಪಾ... ನಿಮಗ ತಿರುಗಾಡಿ ಆಯಾಸ ಆಗ್ಯಾದ. ಉಂಡು ಮಲಿಗಿ ಬುಡ್ರಿ ಎಲ್ಲಾ ಮರುತೋಗ್ತದ' ಎಂದು ರೊಟ್ಟಿ ತಟ್ಟಲು ಹೋದ. 'ಅಂಗಲ್ಲಲೇ ನನ್ನ ನಿನ್ನ ಋಣಾನುಬಂಧನ್ನ ಇವರೆಲ್ಲ ಸೇರಿ ಚುನಾವಣೆ ಕಣದಾಗ ಒಗಿತಾರಲಲೇ... ನನಗ್ಯಾಕೋ ಮನಿಸಿನ್ಯಾಗ ಕಸಿವಿಸಿ ಆಗಕತ್ಯಾದ. ನಾಳೆ ಮಗ ಬರುತಾನ. ನಿನ್ನನ್ನ ಪ್ರಚಾರಕ್ಕ ಒಯ್ಯಿತಾರಲೇ...' ಜೋಳದ ಹಿಟ್ಟು ಕಲಿಸುತ್ತಿದ್ದವನು 'ಯಪ್ಪೋ ಅದಕ್ಯಾಕ ಇಷ್ಟೊಂದು ಚಿಂತಿ ಮಾಡ್ತೀರಿ. ಅವರಿಂದ ಹೋದ್ರಾಯ್ತು.' ಎಂದು ನಿರುಮ್ಮಳನಾಗಿ ಅಂದ. ರೊಟ್ಟಿ ತಟ್ಟಿ ತಂದು ಗೌಡ್ರಿಗೆ ಕೊಟ್ಟ. 'ನಿನ ಕೈಯ್ಯಾಗ ಅದೇನು ಮಂತ್ರ ಐತೆಲೆ. ರೊಟ್ಟಿ ಒಳ್ಳೇ ಅಮೃತ ಆದಂಗ ಆಗ್ಯಾವ. ನಿಮ್ಮ ಗೌಡಸಾನಿನೂ ಹಿಂಗೆ ಮಾಡುತ್ತಿದ್ದಲ್ಲ' ಎಂದು ಕಣ್ಣೀರು ಒರಸಿಕೊಂಡರು. 'ಯಪ್ಪೋ ಹೋದ ದಿನಗಳು ಮತ್ತೇ ಬರದಿಲ್ಲಪ್ಪೋ. ಸುಮ್ಮನ ಉಂಡು ಮಲಿಗ್ರಿ. ನಾಳೆ ಸಣ್ಣ ಗೌಡ್ರರು ಬರ್ತಾರ. ಅವರಿಗೆಲ್ಲ ವ್ಯವಸ್ಥಾ ಮಾಡಬೇಕು' ಎಂದು ನೀರು ತಂದು ಕೊಟ್ಟು ಉಂಡು ತಟ್ಟೆ ತಗಂಡು ಹೋದ. 'ಏನೊ ದೇವರು ಇಟ್ಟಾಂಗ ಆಗಲಿ. ನಂದಾರ ಏನು ನಡಿತದ. ಮಗ ಹೇಳಿದಂಗ ಕೇಳಬೇಕು ಅಷ್ಟೇ... ನೀ ಉಂಡುಬುಡು ಅವರಿಗೇನು